# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಮಯದ ಅಪರಾಧಗಳ ವಿಶೇಷ ನ್ಯಾಯಾಲಯ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಜಿಲ್ಲೆ, ರಾಯಚೂರು.

ಸ್ಪೇಷಲ್ .ಸಿ **ಸಂಖ್ಯೆ: 367/2020**

ಪ್ರಾ.ಸಾ-08

ಚಾ.ಸಾ-13

ಸಾಕ್ಷಿದಾರರು ಕ್ರಮವಾಗಿ ಪ್ರಮಾಣ ವಚನ ಮಾಡಿದರು ದಿನಾಂಕ 07-12-2021.

| | |
|---|---|
| ಸಾಕ್ಷಿದಾರರ ಹೆಸರು | ಶರಣಪ್ಪ |
| ತಂದೆಯ ಹೆಸರು | ಸಣ್ಣಬಸಪ್ಪ |
| ವಯಸ್ಸು | 46 |
| ಉದ್ಯೋಗ | ಮುಖ್ಯಾಧಿಕಾರಿ ಪುರಸಭೆ ದೇವದುರ್ಗ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ : ಸಾರ್ವಜನಿಕ ಅಭಿಯೋಜಕರಾದ ಮಂಜುನಾಥ ರವರಿಂದ .**

ನಾನು ಫೆಬ್ರುವರಿ-**2020** ರಿಂದ ಪುರಸಭೆ ಮುಖ್ಯಾಧಿಕಾರಿಯಾಗಿ ದೇವದುರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ **20-08-2020** ರಂದು ದೇವದುರ್ಗ ವಾರ್ಡ್ ನಂ.**15** ರ ಸಾರ್ವಜನಿಕರು ಆರೋಪಿತರು ತಮ್ಮ ನಿವೇಶನದ ಮುಂದಿರುವ ರಸ್ತೆಯನ್ನು ಅತೀಕ್ರಮಣ ಮಾಡಿ ಕಟ್ಟಡ ಕಟ್ಟುತ್ತಿದ್ದರು ಎಂದು ಅರ್ಜಿಯನ್ನು ಕೊಟ್ಟಿದ್ದರು. ನಾನು ಮತ್ತು ಜೆ.ಇ. ಅವರು ಹೋಗಿ ಸ್ಥಳ ಪರಿಶೀಲನೆ ಮಾಡಿರುತ್ತೇವೆ. ಸ್ಥಳ ಪರಿಶೀಲನೆ ಮಾಡಿದಾಗ ಆರೋಪಿತರು ರಸ್ತೆಯನ್ನು ಒತ್ತುವರಿ ಮಾಡಿದ ಬಗ್ಗೆ ಕಂಡು ಬಂದಿತು. ಆರೋಪಿತರು ನಮ್ಮ ಕಚೇರಿಯಿಂದ ಕಟ್ಟಡ ಕಟ್ಟಲು ಯಾವುದೇ ಪರವಾನಿಗೆ ಪಡೆದಿರಲಿಲ್ಲ. ಆದರೆ ಆರೋಪಿತರು ಕೊಳಚೆ ನಿರ್ಮೂಲನಾ ಮಂಡಳಿ ಕಲಬುರಗಿ ಇವರೇ ಆ ಕಟ್ಟಡವನ್ನು ಕಟ್ಟುತ್ತಿದ್ದರು. ಅದಕ್ಕೆ ನಾನು ಕೊಳಚೆ ನಿರ್ಮೂಲನಾ ಮಂಡಳಿ ಕಲಬುರಗಿ ಇವರಿಗೆ ರಸ್ತೆಯ ಅತೀಕ್ರಮಣ ಆಗಿದ್ದ ಬಗ್ಗೆ ತಿಳಿಸಿ ಅತೀಕ್ರಮಣ ಮಾಡಿದ ಸ್ಥಳವನ್ನು ಬಿಟ್ಟುಕೊಡುವಂತೆ ಸೂಚಿಸಿದೆವು. ಕೊಳಚೆ ನಿರ್ಮೂಲನಾ ಮಂಡಳಿ ಕಲಬುರಗಿ ಇವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಒತ್ತುವರಿಯಾದ ಕಟ್ಟಡವನ್ನು ತೆರವುಗೊಳಿಸಿದರು. ಒತ್ತುವರಿ ಮಾಡಿದ ಜಾಗೆಯಲ್ಲಿ ಸರ್ಕಾರದಿಮದ ಕೊರೆಸಲಾದ ಬೋರವೆಲ್ ಇತ್ತು. ಅದನ್ನು ಅತೀಕ್ರಮಣವನ್ನು ತೆರವುಗೊಳೀಸಿ ಬೋರವೆಲ್ಲನ್ನು ಹೊರಗೆ ಬಿಟ್ಟಿದ್ದಾರೆ. ಸದರಿ ಕಟ್ಟಡ ಇನ್ನೂ ನಿರ್ಮಾಣ ಹಂತದಲ್ಲಿದೆ.

**2.** ದಿನಾಂಕ **26-06-2020** ರಂದು ಡಿ.ವೈ.ಎಸ್.ಪಿ ಲಿಂಗಸುಗೂರು ಅವರು ವಿವಾದಿತ ಸ್ಥಳದ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದರಿಂದ ನಾನು ದಿನಾಂಕ **20-07-2020** ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೊಳಚೆ ನಿರ್ಮೂಲನಾ ಮಂಡಳಿ ರಾಯಚೂರು ಇವರಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಪತ್ರ ನೀಡಿರುತ್ತೇನೆ. ಅದೇ ದಿನ **1** ನೇ ಆರೋಪಿಗೆ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸುವಂತೆ ನೋಟಿಸು ಕೊಟ್ಟಿರುತ್ತೇನೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೊಳಚೆ ನಿರ್ಮೂಲನಾ ಮಂಡಳಿ ರಾಯಚೂರು ಇವರಿಗೆ ನೀಡಿದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದನ್ನು ನಿ.ಪಿ-**4** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**4**(ಎ) ಎಂದು ಗುರುತಿಸಲಾಯಿತು. **1** ನೇ ಆರೋಪಿಗೆ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸುವಂತೆ ನೀಡಿದ ನೋಟಿಸನ್ನು ನಿ.ಪಿ-**5** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**5**(ಎ) ಎಂದು ಗುರುತಿಸಲಾಯಿತು.

**3.** ದಿನಾಂಕ **23-07-2020** ರಂದು ಡಿ.ವೈ.ಎಸ್.ಪಿ ಲಿಂಗಸುಗೂರು ಅವರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ನಿ.ಪಿ-**6** ಎಂದು, ಸಂಬಂಧಿಸಿದ ಭಾಗವನ್ನು ನಿ.ಪಿ-**6**(ಎ) ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**6**(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ ಎಮ್.ಜೆಡ್.ಪಿ ವಕೀಲರಿಂದ :-**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೊಳಚೆ ನಿರ್ಮೂಲನಾ ಮಂಡಳಿ ರಾಯಚೂರು ಇವರಿಗೆ ಲಿಖಿತ ಆದೇಶ ಮಾಡಿ ಸ್ಥಳ ಪರಿಶೀಲನೆಗೆ ಕರೆದಿದ್ದೆವು. ಡಿ.ವೈ.ಎಸ್.ಪಿ ಲಿಂಗಸುಗೂರು ಇವರ ವಿನಂತಿ ಮೇರೆಗೆ ನಾನು ನಮ್ಮ ಕೆಳಅಧಿಕಾರಿಯನ್ನು ವೀಕ್ಷಣೆಗೆ ಕಳುಹಿಸಿದ್ದೆ ಅವರು ಆರೋಪಿತರು ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿದ ಬಗ್ಗೆ ವರದಿ ನೀಡಿರುತ್ತಾರೆ. ನಮ್ಮ ಕಚೇರಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅವರು ಸ್ಥಳ ಪರಿಶೀಲನೆ ಮಾಡಿ ನೀಡಿದ ವರದಿಯನ್ನು ನಾನು ಡಿ.ವೈ.ಎಸ್.ಪಿ ಅವರಿಗೆ ಕಳುಹಿಸಿ ಕೊಟ್ಟಿಲ್ಲ. ಸದರಿ ಆರೋಪಿತರ ಅತೀಕ್ರಮಣ ಮಾಡಿದ ಜಾಗವನ್ನು ನಾನು ನೋಡಿದ್ದೇನೆ. ಆ ಜಾಗದ ಸೈಜ್ ಎಷ್ಟಿದೆ ಎಂದು ದಾಖಲೆಗಳನ್ನು ಪರಿಶೀಲಿಸದೆ ಹೇಳಲು ಆಗುವದಿಲ್ಲ. ನಮ್ಮ ಸಹಾಯಕ ಇಂಜನಿಯರ್ ಅವರು ಸ್ಥಳ ಪರಿಶೀಲನೆ ಹೋದ ನೀಡಿದ ವರದಿಯಲ್ಲಿ ಆರೋಪಿತರ ಜಾಗ ಅಳತೆ ಮತ್ತು ಅತೀಕ್ರಮಣ ಮಾಡಿದ ಬಾಗದ ಅಳತೆಯನ್ನು ನಮೂದಿಸಿದೆ. ಸಹಾಯಕ ಇಂಜನಿಯರ್ ಅವರ ವರಧಿಯನ್ನು ಆದರಿಸಿ ನನ್ನ

ವರದಿಯನ್ನು ತನಿಖಾಧಿಕಾರಿಗೆ ನೀಡಿದ್ದೇನೆ. ಸಹಾಯಕ ಇಂಜನಿಯರ್ ಅವರ ವರದಿಯನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯವರಿಗೆ ಕೊಟ್ಟಿಲ್ಲ. ನಿ.ಪಿ-4 ರಿಂದ 6 ರಲ್ಲಿ ಜಾಗದ ವಿಸ್ತೀರ್ಣವನ್ನು ಬರೆದಿಲ್ಲ ಎಂದರೆ ಸರಿ.

**2.** ಕೊಳಚೆ ನಿರ್ಮೂಲನಾ ಮಂಡಳಿಯವರು ಮನೆ ಕಟ್ಟಬೇಕಾದರೆ ದಾಖಲೆಗಳನ್ನು ಪರಿಶೀಲಿಸಿ ಕಟ್ಟುತ್ತಾರೆ ಎಂದರೆ ಸರಿ. ಆದರೆ ಕಟ್ಟುತ್ತಿರುವ ಜಾಗೆಯ ಬಗ್ಗೆಯಾಗಲೀ ಅಥವಾ ಮನೆಯ ಬಗ್ಗೆಯಾಗಲೀ ನಮ್ಮ ಕಚೇರಿಗೆ ವಿವರಣೆ ಬರುವದಿಲ್ಲ. ಕೊಳಚೆ ನಿರ್ಮೂಲನಾ ಮಂಡಳಿಯವರು ಆರೋಪಿತರಿಗೆ ಸಂಬಂಧಿಸಿದ ಜಾಗವನ್ನು ಪರಿಶೀಲಿಸಿ ನಮ್ಮ ಕಚೇರಿಯ ಪರವಾನಿಗೆ ಪಡೆದು ಮನೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು ಎಂದರೆ ಸರಿಯಲ್ಲ. ನಾವು ಆರೋಪಿತರಿಗೆ ನೋಟಿಸ್ ಕೊಟ್ಟ ನಂತರ ಆರೋಪಿತರು ತಮ್ಮ ಜಾಗೆಯ ಬಗ್ಗೆ ದಾಖಲೆಗಳನ್ನು ನಮ್ಮ ಕಚೇರಿಗೆ ತಂದು ಹಾಜರು ಪಡಿಸಿದ್ದಾರೋ ಇಲ್ಲವೋ ಎಂಬದನ್ನು ದಾಖಲೆ ಇಲ್ಲದೆ ಹೇಳಲಾಗುವದಿಲ್ಲ. ಆರೋಪಿತರು ನೀಡಿದ ದಾಖಲೆಗಳು ಸರಿಯಾಗಿದ್ದು ಅದನ್ನು ಮರೆಮಾಚಿ ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-4 ರಿಂದ 6 ರಲ್ಲಿ ನಾನು ವೈಯಕ್ತಿಕವಾಗಿ ಸ್ಥಳ ಪರಿಶೀಲನೆ ಮಾಡಿದ ಬಗ್ಗೆ ಬರೆದಿಲ್ಲ ಎಂದರೆ ಸರಿ. ಡಿ.ವೈ.ಎಸ್.ಪಿ ಲಿಂಗಸುಗೂರು ಅವರ ವಿನಂತಿ ಮೇರೆಗೆ ಸುಳ್ಳು ದಾಖಲೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸರ್ಕಾರಿ ಜಾಗೆಯನ್ನು ಒತ್ತುವರಿ ಮಾಡಿ ಮನೆ ಕಟ್ಟುತ್ತಿರಲಿಲ್ಲ ಸರ್ಕಾರದವರು ಕೊರೆಸಿದ ಬೊರವೆಲ್ಲನ್ನು ಅತೀಕ್ರಮಣ ಮಾಡಿಲ್ಲ ಪೋಲಿಸರಿಗೆ ಸಹಾಯವಾಗುವಂತೆ ಸುಳ್ಳು ವರದಿಯನ್ನು ನಾನು ನೀಡಿದ್ದೇನೆ ಎಂದರೆ ಸರಿಯಲ್ಲ. ಕೊಳಚೆ ನಿರ್ಮೂಲನಾ ಮಂಡಳಿಯವರು ಆರೋಪಿತರ ಜಾಗದಲ್ಲಿಯೇ ಮನೆ ಕಟ್ಟಿಕೊಡುತ್ತಿದ್ದರು ನಾನು ನನ್ನ ಅಧಿಕಾರಿವನ್ನು ದುರುಪಯೋಗ ಪಡಿಸಿಕೊಂಡು ಪೋಲಿಸರಿಗೆ ಸುಳ್ಳೂ ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು)

ಓ. ಹೇ. ಕೇ. ಸರಿ ಇದೆ.

1ನೇ ಹೆಚುವ್ಚರಿ ಸತ್ರ ನ್ಯಾಯಾಧೀಶರು,
ರಾಯಚೂರು.